ಪ್ರಧಾನ **ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.**

CC. 846/2021 **CW.2 PW.2**

ಹೆಸರು ಃ ಚೇತನ್

ತಂದೆಯ – **ಹೆಸರು** ಃ ಲೇಟ್ ಅಣ್ಣಸ್ವಾಮಿ

ವಯಸ್ಸು ಃ **36** ವರ್ಷ

ವೃತ್ತಿ : ವ್ಯಾಪಾರಿ

ವಾಸ ಸ್ಥಳ ಃ ನಾರಗೋನಹಳ್ಳಿ ಗ್ರಾಮ, ನಾಗಮಂಗಲ.

ಸಾಕ್ಷಿಯು ಪ್ರಮಾಣ ಮಾಡಿದ ದಿನಾಂಕ ಃ23-06-2026.

ಮುಖ್ಯವಿಚಾರಣೆಃ- ಸ.ಸ.ಅ ರವರಿಂದಃ-

ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಬಕಾರಿ ಪೊಲೀಸರು ನನಗೆ ಯಾವುದೇ ನೋಟೀಸು ನೀಡಿರುವುದಿಲ್ಲ ಅಥವಾ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಅಥವಾ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಅಬಕಾರಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಅಥವಾ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ನೋಟೀಸಿನ ನ ಮೇಲೆ ಇದ್ದು, ನೋಟೀಸನ್ನು ನ್ನು ಈಗಾಗಲೇ ನಿಪಿ.**2** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.**2**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ

ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ಶೋಧನಾ ವಾರೆಂಟ್ ನ ಮೇಲೆ ಇದ್ದು, ಶೋಧನಾ ವಾರೆಂಟ್ ನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ಮಹಜರ್ ನ ಮೇಲೆ ಇದ್ದು, ಮಹಜರ್ ನ್ನು ಈಗಾಗಲೇ ನಿಪಿ.5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ಮಾದರಿ ಸೀಲಿನ ನಕಲಿನ ಮೇಲೆ ಇದ್ದು, ಮಾದರಿ ಸೀಲಿನ ನಕಲನ್ನು ಈಗಾಗಲೇ ನಿಪಿ.6 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿ ಮಾಲುಪಟ್ಟಿಯ ಮೇಲೆ ಇದ್ದು, ಮಾಲುಪಟ್ಟಿ ಈಗಾಗಲೇ ನಿಪಿ.7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು. ನಿಪಿ.2, 4 ರಿಂದ 7 ಕ್ಕೆ ನಾನು ಈಗ್ಗೆ 4 – 5 ವರ್ಷಗಳ ಹಿಂದೆ ಅಬಕಾರಿ ಪೊಲೀಸರ ಕೋರಿಕೆಯ ಮೇರೆಗೆ ನಾಗಮಂಗಲ ಟೌನ್ ನಲ್ಲಿ ಇರುವ ನಾನು ಕೆಲಸ ಮಾಡುವ ಎಂ.ಎಸ್.ಐ.ಎಲ್. ಅಂಗಡಿಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.2, 4 ರಿಂದ 7 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ. ನಿಪಿ.2, 4 ರಿಂದ 7 ಕ್ಕೆ ಸಹಿ ಮಾಡುವಾಗ ನನ್ನ ಜೊತೆ ಮಧುಸೂಧನ ರವರು ಸಹ ಇದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಮಾನ್ಯ ಸಂಸಂಅ ಇವರಿಂದಃ-

ದಿನಾಂಕಃ **22-02-2021** ರಂದು ಅಬಕಾರಿ ಪೊಲೀಸರು ನಾಗಮಂಗಲ ಟೌನ್ ಮೈಸೂರು ರಸ್ತೆಯ ರಹಮತ್ ನಗರದಲ್ಲಿ ಇರುವ ಆರೋಪಿಯ ಮನೆಯ ಮೇಲೆ ದಾಳಿ ಮಾಡಬೇಕು ಎಂದು ನಮಗೆ ವಿಚಾರ ತಿಳಿಸಿ ನಿಪಿ.**2** ರಂತೆ ನನಗೆ ನೋಟೀಸು ಜಾರಿ ಮಾಡಿ ನನ್ನನ್ನು ಹಾಗೂ ಚಾಸಾ.**3** ರವರನ್ನು ಕರೆದುಕೊಂಡು ಸಂಜೆ **05 – 45** ಗಂಟೆಯ ಸಮಯಕ್ಕೆ ನಾಗಮಂಗಲ ಟೌನ್ ಮೈಸೂರು ರಸ್ತೆಯ ರಹಮತ್ ನಗರದಲ್ಲಿ ಇರುವ ಆರೋಪಿಯ ಮನೆಯ ಮೇಲೆ ದಾಳಿ ನಡೆಸಿ ಮನೆಯ ಒಳಗೆ ಇದ್ದ ಗಾಂಜಾವನ್ನು ಅಮಾನತ್ತು ಪಡಿಸಿಕೊಂಡು ಸಂಜೆ **05 – 45** ಗಂಟೆಯಿಂದ **06 – 40** ಗಂಟೆಯ ವರೆಗೆ ಈಗ ಓದಿ ಹೇಳಲಾದ ನಿಪಿ.**5** ರಂತೆ ಮಹಜರ್ ಕ್ರಮ ಜರುಗಿಸಿ ಎಲ್ಲಾ ವಿಚಾರಗಳನ್ನು ನನಗೆ ತಿಳಿಸಿ ನಿಪಿ.**5** ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಿಪಿ.**6** ಮತ್ತು **7** ನ್ನು ತಯಾರಿಸಿ ಅದಕ್ಕೂ ಸಹ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಬಕಾರಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಈಗ ಓದಿ ಹೇಳಲಾದ ನಿಪಿ.**10** ರಂತೆ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಮನೆಯ ಮೇಲೆ ದಾಳಿ ಮಾಡಿ ಆತನ ವಶದಲ್ಲಿ ಇದ್ದ ಗಾಂಜಾವನ್ನು ಅಮಾನತ್ತು ಪಡಿಸಿಕೊಂಡಿರುವ ವಿಚಾರ ಹಾಗೂ ನಿಪಿ.**2, 4** ರಿಂದ **7** ಮತ್ತು **10** ರಲ್ಲಿ ಇರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಲಯ, ನಾಗಮಂಗಲ.

ಸಾಕ್ಷಿದಾರರ ಸಹಿ: